ಎ. ಡಿ. ಬಿ. ಯೋಜನೆಯಡಿಯಲ್ಲಿ ಭಟ್ಕಳ ನಗರದ ಅಭಿವೃದ್ಧಿ

1633 (1876) : ಶ್ರೀ ಜೆ. ಡಿ. ನಾಯಕ್ (ಭಟ್ಕಳ) : ಮಾನ್ಯ ನಗರಾಬಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಏಡಿಬಿ ಯೋಜನೆಯಡಿಯಲ್ಲಿ ಭಟ್ಕಳ ನಗರ ಅಭಿವೃದ್ಧಿಗೆ ಮಂಜೂರು ಮಾಡಲಾದ ಅನುದಾನದ ಮೊತ್ತವೆಷ್ಟು;

(ಆ) ಈ ಅನುದಾನಕ್ಕೆ ಸಂಬಂಧಿಸಿದ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

(ಅ) ರೂ. 37.70 ಕೋಟಿಗಳು (ಅಂದಾಜು)

(ಆ) ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಮಂಡಳಿಯು ಈ ಯೋಜನೆಗಾಗಿ 175 ಮಿಲಿಯ ಡಾಲರ್‌ಗಳ ಸಾಲವನ್ನು ಮಂಜೂರು ಮಾಡಿದೆ. ಏಡಿಬಿಯೊಂದಿಗೆ ಸಾಲದ ಒಡಂಬಡಿಕೆಗೆ ಸಹಿ ಮಾಡಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಅಧಿಸೂಚನೆ ನೀಡಿದೆ. ಒಡಂಬಡಿಕೆಗಳಿಗೆ ಶೀಘ್ರದಲ್ಲೇ ಸಹಿ ಮಾಡಲಾಗುವುದು. ತದನಂತರ ಯೋಜನೆಯು ಅನುಷ್ಠಾನಕ್ಕೆ ಬರಲಿದೆ.

ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕೈಗಾರಿಕಾ ಷೆಡ್ಡುಗಳ ನಿರ್ಮಾಣ

1634 (1907) : ಶ್ರೀ ನಂಜುಂಡಸ್ವಾಮಿ ಎಸ್. (ಕೊಳ್ಳೇಗಾಲ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕೊಳ್ಳೇಗಾಲ ತಾಲ್ಲೂಕು ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ಅಳತೆಯ ಎಷ್ಟು ಕೈಗಾರಿಕಾ ಷೆಡ್ಡುಗಳನ್ನು ನಿರ್ಮಿಸಲಾಗಿದೆ;

(ಆ) ಮೇಲ್ಕಂಡ ಎಲ್ಲಾ ಷೆಡ್ಡುಗಳನ್ನು ಹಂಚಿಕೆ ಮಾಡಲಾಗಿದೆಯೇ;

(ಇ) ಹಾಗಿದ್ದಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರಿಗೆ ಎಷ್ಟು ಜನರಿಗೆ ಯಾವ ಯಾವ ಅಳತೆಯ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ?

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

(ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (ನಿ)ವು 9 'ಸಿ' (1500 ಚ. ಅ.) 6 ಡಿ (750 ಚ. ಅ) ಮತ್ತು 9 'ಸೂಪರ್ ಮಿನಿ' (480 ಚ. ಅ) ಯ ಮಳಿಗೆಗಳನ್ನು ಕೈಗಾರಿಕಾ ವಸಾಹತು ಕೊಳ್ಳೇಗಾಲದಲ್ಲಿ ನಿರ್ಮಿಸಿದೆ.

(ಆ) ಹೌದು

(ಇ) ಕೊಳ್ಳೇಗಾಲ ಕೈಗಾರಿಕಾ ವಸಾಹತುವಿನಲ್ಲಿನ ಎಲ್-5 (8100 ಚಅ), ವಿಶೇಷ ನಿವೇಶನ-1 (550.37 ಚ.ಮಿ) ಮತ್ತು ವಿಶೇಷ ನಿವೇಶನ-2 (5337 ಚ.ಅ), ಅಳತೆಗಳ ಮೂರು